**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.148/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಎಸ್. ಎಂ. ಪ್ರಭಾಕರ |
| ತಂದೆಯ ಹೆಸರು | : | ಮಲ್ಲೇಶಪ್ಪ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಶಂಕರನಹಳ್ಳಿ, ದಾವಣಗೆರೆ ತಾಲ್ಲೂಕು |

ಪಿ.ಡಬ್ಲ್ಯೂ ಃ 3

ಸಿ.ಡಬ್ಲ್ಯೂ ಃ 5

ದಿ: 18-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಈಗ ನನಗೆ ತೋರಿಸಿದ ಸೃಜನ್ ನ ಶವ ತನಿಖಾ ವರದಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ-7 ಅಂತ, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಅಂತ ಗುರುತಿಸಲಾಯಿತು. ಸೃಜನ್ ನ ಶವ ತನಿಖಾ ವರದಿ ತಯಾರಿಸುವ ಕಾಲಕ್ಕೆ ತೆಗೆದಿರುವ ಪೋಟೋವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಅಂತ ಗುರುತಿಸಲಾಗಿದೆ. ನಿಪಿ-2 ರ ಪೋಟೋದಲ್ಲಿ ನಾನು ಇದ್ದೇನೆ. ಅದರಲ್ಲಿ ಸೃಜನ್ ನ ಮೃತ ದೇಹ ಇರುತ್ತದೆ. ಈಗ ನನಗೆ ತೋರಿಸಿದ ಕಿರಣ ಕುಮಾರರವರ ಶವ ತನಿಖಾ ವರದಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ-8 ಅಂತ, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಅಂತ ಗುರುತಿಸಲಾಯಿತು. ಕಿರಣ ಕುಮಾರರವರ ಶವ ತನಿಖಾ ವರದಿ ತಯಾರಿಸುವ ಕಾಲಕ್ಕೆ ತೆಗೆದಿರುವ ಪೋಟೋವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-3 ಅಂತ ಗುರುತಿಸಲಾಗಿದೆ. ನಿಪಿ-3 ರ ಪೋಟೋದಲ್ಲಿ ನಾನು ಇದ್ದೇನೆ. ಅದರಲ್ಲಿ ಕಿರಣ ಕುಮಾರರವರ ಮೃತ ದೇಹ ಇರುತ್ತದೆ. ಈ ಎರಡು ಶವ ತನಿಖಾ ವರದಿಗಳನ್ನು ತಯಾರಿಸುವ ಕಾಲಕ್ಕೆ ನನ್ನೊಂದಿಗೆ ದೂರುದಾರರು ಮತ್ತು ಚಾಸಾ-

4 ರವರು ಇದ್ದರು. ಸೃಜನ್ ರವರ ಶವ ತನಿಖಾ ವರದಿಯನ್ನು ದಿಃ 25-05-2020 ರಂದು ಮತ್ತು ಕಿರಣ ಕುಮಾರರವರ ಶವ ತನಿಖಾ ವರದಿಯನ್ನು ದಿಃ 26-05-2020 ರಂದು ಮಾಡಿರುತ್ತಾರೆ. ನಮ್ಮ ಊರಾದ ಶಂಕರನಹಳ್ಳಿ ಗ್ರಾಮದ ಹತ್ತಿರ ಕಲ್ಲು ಕ್ವಾರಿ ಗುಂಡಿ ಇದ್ದು, ಅದರಲ್ಲಿ ನೀರು ಇದ್ದು ಅದರಲ್ಲಿ ಸೃಜನ್ ಮತ್ತು ಕಿರಣ ಕುಮಾರರವರು ಬಿದ್ದು ಮರಣ ಹೊಂದಿರುತ್ತಾರೆ. ಸದರಿಯವರ ಮೃತ ದೇಹಗಳನ್ನು ಆ ಗುಂಡಿಯಿಂದ ಹೊರಗೆ ತೆಗೆದು ಶವ ತನಿಖಾ ವರದಿಗಳನ್ನು ತಯಾರಿಸಿರುತ್ತಾರೆ. ಆ ಕಲ್ಲು ಕ್ವಾರಿ ಸರ್ವೇ ನಂಬರ 25/3 ನಲ್ಲಿ ಇರುತ್ತದೆ. ಆ ಕಲ್ಲು ಕ್ವಾರಿ ಸರ್ವೇ ನಂಬರ 25/3 ಅಂತ ನನಗೆ ಖಚಿತವಾಗಿ ಗೊತ್ತಿಲ್ಲ. ಗ್ರಾಮ ಲೆಕ್ಕಾಧಿಕಾರಿಯವರು ಆ ಕಲ್ಲು ಕ್ವಾರಿ ಸರ್ವೇ ನಂಬರ 25/3 ಅಂತ ಹೇಳಿದರು. ಗ್ರಾಮ ಲೆಕ್ಕಾಧಿಕಾರಿಯವರು ಕಲ್ಲು ಕ್ವಾರಿಯನ್ನು ಹೇಮರಾಜ ಮತ್ತು ಅವರ ಕುಟುಂಬದವರು ಮಾಡುತ್ತಿರುವಾಗಿ ತಿಳಿಸಿದರು.

**<u>ಪಾಟೀ ಸವಾಲುಃ ಶ್ರೀ ., ವಕೀಲರಿಂದ ಆರೋಪಿತರ ಪರವಾಗಿ</u>**:

2. ಮಹಜರ ಮಾಡುವ ಪೂರ್ವದಲ್ಲಿ ನಾನು ಮಾಯಕೊಂಡ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಪೊಲೀಸರು ಮತ್ತು ಕಂದಾಯ ಇಲಾಖೆಯವರು ಸೇರಿ ಮಹಜರನ್ನು ಬರೆದರು. ಆ ಮಹಜರನ ಬರವಣಿಗೆ ಯಾರದ್ದು ಅಂತ ನನಗೆ ಗೊತ್ತಿಲ್ಲ ಆದರೆ ಅದನ್ನು ಬರೆದವರು ಪೊಲೀಸರು ಅಥವಾ ಕಂದಾಯ ಇಲಾಖೆಯವರು ಆಗಿರುತ್ತಾರೆ. ನಾನು ಹೋಗುವಷ್ಟರಲ್ಲಿ ಮಹಜರನಲ್ಲಿ ಬರವಣಿಗೆ ಮಾಡಿದ್ದು ಇತ್ತು. ಅಲ್ಲಿ ನಾನು ಹೋಗುವ ಪೂರ್ವದಲ್ಲಿ ಬಹಳ ಜನರು ಕೂಡಿದ್ದರು. ನನಗೆ ಮಹಜರಗೆ ಬರಲು ನೋಟಿಸ್ಸು ಕೊಟ್ಟಿರಲಿಲ್ಲ. ಆ ಮಹಜರ ಠಾಣೆಯಲ್ಲಿ ತಯಾರಿಸಿದ್ದು ಇರುತ್ತದೆ ಅಂದರೆ ಅದು ನನಗೆ ಗೊತ್ತಿಲ್ಲ. ಗ್ರಾಮ ಲೆಕ್ಕಾಧಿಕಾರಿಯವರು ಸೃಜನ್ ರವರ ಶವ ತನಿಖಾ ಕಾಲಕ್ಕೆ ಇದ್ದರು. ಸರ್ವೇ ನಂಬರ 25/3 ರ ಚಕ್ಕುಬಂದಿ ನನಗೆ ಗೊತ್ತಿಲ್ಲ. ಇನ್ಸಪೆಕ್ಟರ್ ರವರು ಪೋಟೋಕ್ಕೆ ಮಾತ್ರ ನಿಲ್ಲಿಸಿಕೊಂಡು ತೆಗೆಸಿದ್ದಾರೆ ಅಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ನನ್ನ ಸಮಕ್ಷಮ ಯಾವುದೇ ಮಹಜರ ಮಾಡಿಲ್ಲ ಅಂದರೆ ಸರಿಯಲ್ಲ. ಮಹಜರನಲ್ಲಿ ಬರೆದ ವಿಷಯ ನನಗೆ

ಗೊತ್ತಿಲ್ಲ ಅಂದರೆ ಸುಳ್ಳು. ಆ ಎರಡು ಮಹಜರಗಳನ್ನು ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿಯೇ ತಯಾರಿಸಿದ್ದರು ಅಂದರೆ ಸುಳ್ಳು. ಮಹಜರ ಕಾಲಕ್ಕೆ ನಾನು ಹಾಜರಿರಲಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.